ಶ್ರೀ ಮಾಲಿ ಮರಿಯಪ್ಪ.—ಅದಕ್ಕಾಗಿ ಬೇರೆ ಪ್ರಶ್ನೆ ಕಳುಹಿಸಿದರೆ ಆ ಸಮಾಚಾರ ಒದಗಿಸಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾಲ್ಲೂಕು ಬೋರ್ಡ್ ಚುನಾವಣೆ ಹತ್ತಿರವಿರುವುದರಿಂದ ಕಾನೂನು ಕಟ್ಟಳೆ ಸರಿಯಾಗಿ ನೋಡುವುದಕ್ಕಾಗಿಲ್ಲ, ಅಲ್ಲವೆ ?

ಶ್ರೀ ಮಾಲಿ ಮರಿಯಪ್ಪ.—ಆ ತರಹ ಏನೂ ಇಲ್ಲ, 7-8ವರ್ಷಗಳಿಂದ ಕ್ರಮವಾಗಿ ನಡೆದುಕೊಂಡು ಬರುತ್ತಿದೆ.

COMMENCEMENT OF WORKING OF AGRICULTURAL FARM AT HOSAHALLI VILLAGE IN CHANNAGIRI TALUK.

*Q.—755. Sri KUNDUR RUDRAPPA (Channagiri).—

Will the Government be pleased to state:—

(*a*) the date of commencement of working of Agricultural Farm at Hosahalli Village in Channagiri Taluka ;

(*b*) the amount that has been spent so far for that Farm ;

(*c*) the yield from the Farm ;

(*d*) whether they intend starting Fieldman Training Institute at the said Farm ?

A.—Sri N. RACHAIAH (Minister for Agriculture and Social Welfare)

(*a*) Commenced on 10th January 1960.

(*b*) Total amount spent is Rs. 28,493.89.

(*c*) Estimated yield during 1960-61 is 491-15 lbs. and the estimated realisation is Rs. 11,767 approximately.

(*d*) There is no such proposal for the present.

ಶ್ರೀ ಕುಂದೂರು ರುದ್ರಪ್ಪ.—ಈ ವ್ಯವಸಾಯ ಕ್ಷೇತ್ರದಿಂದ ಲಾಭವೆಷ್ಟು ಬಂದಿದೆ ನಷ್ಟವೆಷ್ಟಾಗಿದೆ ?

†ಶ್ರೀ ಎನ್. ರಾಚಯ್ಯ.—ಲಾಭ ನಷ್ಟದ ಪ್ರಶ್ನೆ ಇಲ್ಲಿ ಬರುವುದಿಲ್ಲ. ರೈತರಿಗೆ ಉತ್ತಮವಾದ ಬೀಜವನ್ನು ಸರಬರಾಯಿ ಕೊಡುವ ಇಂಥ ಫಾರಂ ತೆರೆಯಲ್ಪಡುವುದು.

ಶ್ರೀ ಕುಂದೂರು ರುದ್ರಪ್ಪ.—ಎಷ್ಟು ಎಕರೆಗಳ ಜಮೀನನ್ನು ಇದಕ್ಕಾಗಿ ತೆಗೆದು ಕೊಳ್ಳಲಾಗಿದೆ ?

ಶ್ರೀ ಎನ್. ರಾಚಯ್ಯ.—70 ಎಕರೆಗಳು.

ಶ್ರೀ ಕುಂದೂರು ರುದ್ರಪ್ಪ.—70 ಎಕರೆಯೂ ಸಾಗುವಳಿಯಾಗಿದೆಯೇ ?

ಶ್ರೀ ಎನ್. ರಾಚಯ್ಯ.— ಕೆಲವು ಭಾಗ ಆಗಿದೆ.

ಶ್ರೀ ಕುಂದೂರು ರುದ್ರಪ್ಪ.— ಈಗ ನಷ್ಟವಾಗಿರುವುದಕ್ಕೆ ಕಾರಣವೇನು ? ಪೂರ್ಣವಾಗಿ ಏಕೆ ಸಾಗುವಳಿಮಾಡಿಲ್ಲ ?

ಶ್ರೀ ಎನ್. ರಾಚಯ್ಯ.—ನಷ್ಟವಾಗಿಲ್ಲ. 10-9-1960 ರಲ್ಲಿ ತೆನೂಯ್ ಇರಾಖೆಯಿಂದ ಜಮೀನನ್ನು ವ್ಯವಸಾಯದ ಇಲಾಖೆ ವಹಿಸಿಕೊಂಡಿದೆ. ಇನ್ನು ಬೇರೆ ಹೆಚ್ಚು ಪ್ರದೇಶ ಸಾಗುವಳಿಗೆ

ಬರುತ್ತದೆ. ರೈತರಿಗೆ ಉತ್ತಮವಾದ ಬೀಜವನ್ನೊದಗಿಸಬೇಕೆಂಬುದೇ ಇದರ ಮುಖ್ಯೋದ್ದೇಶ.

Sri M. RAMAPPA.—Is it not possible to make this farm self-supporting ?

Sri N. RACHAIAH.—Our object is to make it more profitable.

Sri M. RAMAPPA.—What has Government done to make it self supporting

Sri N. RACHAIAH.—On 10th January 1960. the land was handed over to the Argicultural Department. Within the period it has been with us, please imagine what best can be done.

ಶ್ರೀ ಸಿ. ಜಿ. ವಾಲಕ್ಕಣ್ಣಪ್ಪ.—ಇದರಿಂದ ಎಷ್ಟು ಬಿತ್ತನೆಬೀಜ, ಎಷ್ಟು ರೈತರಿಗೆ ಕೊಡಲಾಗಿದೆ ? ಯಾವ ಯಾವ ತರಹ ಬೀಜ ಎಷ್ಟೆಷ್ಟು ಕೊಡಲಾಗಿದೆ ?

ಶ್ರೀ ಎಸ್. ರಾಚಯ್ಯ.—ಇನ್ನೂ ಈಗತಾನೆ ಪ್ರಯತ್ನ ನಡೆದಿದೆ, ಇನ್ನು ಮೇಲೆ ಇದರಿಂದ ಹೆಚ್ಚು ಉಪಯೋಗವಾಗಬೇಕು. ಎರಡು ಯೋಜನೆಯಲ್ಲಿ 56 ಸೀಡ್‌ಫಾರಂಗಳನ್ನು ಪ್ರಾರಂಭಿಸಿದ್ದೇವೆ, ಮೂರನೆಯ ಯೋಜನೆಯಲ್ಲಿ ಅವನ್ನು ಇನ್ನೂ ಹೆಚ್ಚಿಸಬೇಕೆಂದಿದ್ದೇವೆ. ಮೊದಲನೆಯ ವರ್ಷ ಯಾವ ವಿಧವಾದ ಕೆಲಸವನ್ನು ಹೆಚ್ಚಾಗಿ ಮಾಡಲು ಸಾಧ್ಯವಿಲ್ಲ. ನಮಗೆ ವಹಿಸಿದ ಜಮೀನು ಮೊದಲು ಅಕ್ಷರಶಃ ಬೈಪಡ್ಡಿ ಆಗಿ ಕೆಲವರಿಂದ ಆಕ್ರಮಿಸಿಕೊಳ್ಳಲ್ಪಟ್ಟಿತ್ತು. ಕಳೆದ ವರ್ಷ ರೆವಿನ್ಯೂ ಇಲಾಖೆ ಅದನ್ನು ಅವರಿಂದ ತಪ್ಪಿಸಿ ನಮ್ಮ ಇಲಾಖೆಗೆ ವಹಿಸಿತು. ಅಲ್ಲಿಂದೀಚೆಗೆ ನಡೆದಿರುವ ಕೆಲಸವನ್ನು ಈಗ ತಿಳಿಸುತ್ತಾಗಿದೆ.

COLLECTION OF STAMP DUTY IN SUB-REGISTRY OFFICES OF KOLLEGAL AND HANNUR IN KOLLEGAL TALUK.

Q.—793. Sri G. VENKATAI GOWDA (Palaiyam).—

Will the Government be pleased to state:—

(*a*) the total stamp duty collected in the Sub-Registry offices of Kollegal and Hannur in Kollegal Taluk for the year 1960-61;

(*b*) whether the said duty has been paid to the Kollegal Taluk Board and if not, the steps taken in this regard ?

A.—Sri KADIDAL MANJAPPA (Minister for Revenue).—

(*a*) Rs. 35,314-25 nP.

(*b*) Yes. A sum of Rs. 19,672-37 nP. due to the Taluk Board has been paid.

Sri G. VENKATAI GOWDA.—What has happened to the balance of the amount after having paid Rs. 19,672.37 ?

†Sri KADIDAL MANJAPPA.—The balance is not payable. It goes to the general revenues because it is levied under the Stamp Act.

Sri G. VENKATAI GOWDA.—Is there no provision under the Mysore Panchayats and Local Boards Act, that only the taluk Boards are empowered to levy this stamp duty ?